## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 176 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಡಾ|| ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 01-02-2021. |
| 4) | ಉತ್ತರಿಸುವವರು | **ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೌಶಲ್ಯಾಭಿವೃದ್ಧಿ ಇಲಾಖೆಯು ಜಾರಿಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮಗಳು ಯಾವುವು: ಫಲಾಪೇಕ್ಷಿಗಳ ಆಯ್ಕೆಗೆ ಅನುಸರಿಸುತ್ತಿರುವ ಮಾನದಂಡಗಳು ಯಾವುವು: (ಸಂಪೂರ್ಣ ವಿವರ ನೀಡುವುದು) | **<u>ಕೌಶಲ್ಯ ಮಿಷನ್</u>**<br>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ ಕೌಶಲ್ಯಾಧಾರಿತ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.<br>ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನಿಗದಿಪಡಿಸಲಾಗಿರುವ ಮಾರ್ಗಸೂಚಿಗಳನ್ವಯ ರಾಜ್ಯದಾದ್ಯಂತ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಗಳನ್ನು ಜಾರಿಗೊಳಿಸಲಾಗಿರುತ್ತದೆ. ಅದರಂತೆ ಸದರಿ ಯೋಜನೆಗಳಡಿ ಕನಿಷ್ಠ ವಯೋಮಾನವನ್ನು 18 ರಿಂದ 35 ವರ್ಷಗಳನ್ನು ನಿಗದಿಪಡಿಸಲಾಗಿದ್ದು, ಅನಕ್ಷರಸ್ಥರನ್ನು ಒಳಗೊಂಡಂತೆ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಹಾಗೂ ಆಯಾ ಜಾಬ್ ರೋಲ್‌ಗಳಿಗೆ ಎನ್.ಎಸ್.ಡಿ.ಸಿ ಯವರು ನಿಗಧಿಪಡಿಸಿರುವ ವಿದ್ಯಾರ್ಹತೆಗನುಸಾರವಾಗಿ ಫಲಾಪೇಕ್ಷಿಗಳನ್ನು ಆಯ್ಕೆ ಮಾಡಲಾಗುವುದು.<br><br>**<u>ಡೇ-ನಲ್ಮ್</u>**<br>ಡೇ-ನಲ್ಮ್ ಅಭಿಯಾನದಡಿ ಫಲಾನುಭವಿಗಳ ಆಯ್ಕೆಗೆ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.<br>• ನಗರದ ಬಿಪಿಎಲ್ ಕುಟುಂಬದವರಾಗಿರಬೇಕು.<br>• ವಾರ್ಷಿಕಆಧಾಯ ರೂ.1.20 ಲಕ್ಷಕ್ಕಿಂತ ಕಡಿಮೆ ಇರಬೇಕು.<br><br>**<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ:</u>**<br>ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿ ಡಿಡಿಯುಜಿಕೆವೈ ಮತ್ತು ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಕೇಂದ್ರ (ಆರ್‌ಸೆಟಿ) ಯೋಜನೆಯಡಿ ಆಸಕ್ತ ಮತ್ತು ಅರ್ಹ ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಜನತೆಗೆ (18-35 ವರ್ಷದೊಳಗಿನ) ತರಬೇತಿ ಮತ್ತು ಆರ್ಥಿಕ ಸೌಲಭ್ಯ ಹಾಗೂ ಉದ್ಯೋಗ ಒದಗಿಸುವ ಸಲುವಾಗಿ ಯೋಜನೆಗಳು ಅನುಷ್ಠಾನದಲ್ಲಿವೆ.<br><br>**<u>ಸಿಡಾಕ್</u>**<br>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್)ವು ಉದ್ಯಮಶೀಲತಾ ತಿಳುವಳಿಕೆ, ಉದ್ಯಮಶೀಲತಾಭಿವೃದ್ಧಿ ಹಾಗೂ ವಿಷಯಾಧಾರಿತ ಉದ್ಯಮಶೀಲತಾಭಿವೃದ್ಧಿ (3 ದಿನ, 6 ದಿನ ಹಾಗೂ 30 ದಿನಗಳ) ಕಾರ್ಯಕ್ರಮಗಳನ್ನು ಜರುಗಿಸಲಾಗುತ್ತಿದೆ. 18-35 ವರ್ಷದೊಳಗಿನ ಉದ್ಯಮ ಹೊಂದಲು ಬಯಸುವ ಯುವಜನತೆ ಈ ಯೋಜನೆಯ ಫಲಾನುಭವಿಗಳು. |
| (ಆ) | ಈ ಯೋಜನೆ/ಕಾರ್ಯಕ್ರಮಗಳಿಂದ ಉದ್ಯೋಗ ಸೃಷ್ಟಿಗೆ ಅವಕಾಶ | **<u>ಕೌಶಲ್ಯ ಮಿಷನ್</u>**<br>ಹೌದು, ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಹಾಗೂ ಪ್ರಧಾನ |

ಒದಗಿಸಲಾಗಿದೆಯೇ: (ಸಂಪೂರ್ಣ ವಿವರ ನೀಡುವುದು)

ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ ತರಬೇತಿ ಪಡೆದ ಶೇ.70ರಷ್ಟು ಅಭ್ಯರ್ಥಿಗಳಿಗೆ ವೇತನಾಧರಿತ/ಸ್ವಯಂ ಉದ್ಯೋಗ ಹೊಂದಲು ಅವಕಾಶ ಕಲ್ಪಿಸಲಾಗಿದೆ.

**ಡೇ–ನಲ್ಮ್**

ಡೇ–ನಲ್ಮ್ ಅಭಿಯಾನದ ಈ ಕೆಳಕಂಡ ಉಪಘಟಕಗಳಡಿ ಉದ್ಯೋಗ ಸೃಷ್ಟಿಗೆ ಅವಕಾಶವನ್ನು ಕಲ್ಪಿಸಲಾಗಿದೆ.

1) ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:

ಸದರಿ ಉಪಘಟಕದಡಿ ನಗರದ ನಿರುದ್ಯೋಗ ಯುವಕ / ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡುತ್ತಾ, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ತರಬೇತಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಶೇ.70 ರಷ್ಟು ಉದ್ಯೋಗವನ್ನು ಕಲ್ಪಿಸಲಾಗುವುದು.

**2) ಸ್ವಯಂ ಉದ್ಯೋಗ ಕಾರ್ಯಕ್ರಮ:**

ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆಯನ್ನು ಸ್ಥಾಪಿಸಲು ರೂ.2.00 ಲಕ್ಷದವರೆಗೆ ಹಾಗೂ ಗುಂಪು ಕಿರು ಉದ್ದಿಮೆಯನ್ನು ಸ್ಥಾಪಿಸಲು ರೂ.10.00 ಲಕ್ಷದ ವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸುತ್ತಾ ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು.

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ:**

ಡಿಡಿಯುಜಿಕೆವೈ ಯೋಜನೆಯಡಿ 144 ಯೋಜನಾ ಅನುಷ್ಠಾನ ಸಂಸ್ಥೆಗಳ ಮೂಲಕ 65 ವೃತ್ತಿಗಳಲ್ಲಿ ಕೌಶಲ್ಯ ತರಬೇತಿ ನೀಡಿ ಶೇ.70 ರಷ್ಟು ವೇತನಾಧರಿತ ಉದ್ಯೋಗವನ್ನು ಕಲ್ಪಿಸಲಾಗಿದೆ. ಆರ್‌ಸೆಟಿ ಯೋಜನೆಯಡಿ ತರಬೇತಿ ನಂತರ ಸ್ವಯಂ ಉದ್ಯೋಗ ಕಲ್ಪಿಸಲು ಅವಕಾಶವಿದೆ.

**ಸಿಡಾಕ್**

ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಅಭ್ಯರ್ಥಿಗಳು ಸ್ವಯಂ ಉದ್ಯೋಗಿಗಳಾಗಲು ಅವಕಾಶ ಒದಗಿಸಲಾಗುತ್ತದೆ ಹಾಗೂ ಸಂಬಂಧಿತ ಬೆಂಬಲ ಸೇವೆಯನ್ನು ನೀಡಲಾಗುತ್ತದೆ.

---

(ಇ) ಕಳೆದ 03 ವರ್ಷಗಳಲ್ಲಿ ಇಲಾಖಾ ವತಿಯಿಂದ ಕೈಗೊಂಡಿರುವ ಯೋಜನೆ /ಕಾರ್ಯಕ್ರಮಗಳು ಯಾವುವು: ಬಿಡುಗಡೆಯಾದ ಮತ್ತು ಬಳಕೆ ಮಾಡಲಾದ ಅನುದಾನ ಎಷ್ಟು; (ಯೋಜನಾ/ಕಾರ್ಯಕ್ರಮವಾರು ವಿವರ ನೀಡುವುದು)

**ಕೌಶಲ್ಯ ಮಿಷನ್**

ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆಯಡಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.:–

(ರೂ.ಲಕ್ಷಗಳಲ್ಲಿ)

| ವರ್ಷ | ಬಿಡುಗಡೆಯಾದ / ಬಳಕೆ ಮಾಡಲಾದ ಅನುದಾನ | |
|---|---|---|
| | ಸಿ.ಎಂ.ಕೆ.ಕೆ.ವೈ. | ಪಿ.ಎಂ.ಕೆ.ವಿ.ವೈ. |
| 2017–18 | 7127.44 | 00.00 |
| 2018–19 | 4440.01 | 79.03 |
| 2019–20 | 6664.12 | 785.11 |

**ಡೇ–ನಲ್ಮ್**

ಡೇ–ನಲ್ಮ್ ಅಭಿಯಾನದಡಿ ಕಳೆದ 3 ವರ್ಷಗಳಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ರಾಜ್ಯದ 277 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೈಗೊಂಡಿರಲಾಗಿರುತ್ತದೆ.

- **ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ:** ಮಹಿಳಾ ಸ್ವ-ಸಹಾಯ ಸಂಘ ಮತ್ತು ಪ್ರದೇಶ ಮಟ್ಟದ ಒಕ್ಕೂಟಗಳಿಗೆ ಆವರ್ತಕ ನಿಧಿ, ದಾಖಲಾತಿಗಳ ವಿತರಣೆ, ಕ್ಷೇತ್ರ ಭೇಟಿ ಹಾಗೂ ವಿವಿಧ ಸಾಮರ್ಥ್ಯಾಭಿವೃದ್ಧಿ

ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ.

- **ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:** ಸದರಿ ಉಪಘಟಕದಡಿ ನಗರದ ನಿರುದ್ಯೋಗ ಯುವಕ / ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುವುದು.
- **ಸ್ವಯಂ ಉದ್ಯೋಗ ಕಾರ್ಯಕ್ರಮ:** ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆಯನ್ನು ಸ್ಥಾಪಿಸಲು ರೂ.2.00 ದವರೆಗೆ ಹಾಗೂ ಗುಂಪು ಕಿರು ಉದ್ದಿಮೆಯನ್ನು ಸ್ಥಾಪಿಸಲು ರೂ.10.00 ಲಕ್ಷದ ವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.
- **ನಗರದ ವಸತಿ ರಹಿತರಿಗೆ ಆಶ್ರಯ :** ವಸತಿ ರಹಿತರನ್ನು ರ್ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ, ಆಶ್ರಯವನ್ನು ಕಲ್ಪಿಸಲಾಗುವುದು.
- **ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:** ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗಿರುತ್ತದೆ.
- **ಸಾಮರ್ಥ್ಯಾಭಿವೃದ್ಧಿ ಮತ್ತು ತರಬೇತಿ:** ಸದರಿ ಉಪಘಟಕದಡಿ ಯೋಜನೆಯನ್ನು ಅನುಷ್ಠಾನಗೊಳಿಸಲು ತೊಡಗಿಸಿಕೊಂಡಿರುವ ಅಧಿಕಾರಿ / ಸಿಬ್ಬಂದಿಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ.

ಡೇ-ನಲ್ಮ್ ಅಭಿಯಾನಕ್ಕೆ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಮತ್ತು ಖರ್ಚಾದ ವಿವರ ಈ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

| ವರ್ಷ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ |
|---|---|---|
| 2017-18 | 3846.18 | 3747.18 |
| 2018-19 | 0 | 5162.78 |
| 2019-20 | 2742.70 | 4078.20 |

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ:**

ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿ ನಿರುದ್ಯೋಗ ನಿವಾರಣೆ ಸಲುವಾಗಿ ಡಿಡಿಯುಜಿಕೆವೈ ಮತ್ತು ಆರ್‌ಸೆಟಿ ಯೋಜನೆಗಳಿಗೆ ಬಿಡುಗಡೆಯಾದ ಮತ್ತು ಬಳಕೆ ಮಾಡಲಾದ ಅನುದಾನದ ವರ್ಷವಾರು ಮಾಹಿತಿ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ವರ್ಷ | ಡಿಡಿಯುಜಿಕೆವೈ | | ಆರ್‌ಸೆಟಿ | |
|---|---|---|---|---|
| | ಬಿಡುಗಡೆಯಾದ | ಬಳಕೆ ಮಾಡಲಾದ ಅನುದಾನ | ಬಿಡುಗಡೆಯಾದ | ಬಳಕೆ ಮಾಡಲಾದ ಅನುದಾನ |
| 2017-18 | 3982.00 | 7764.00* | 510.00 | 256.00 |
| 2018-19 | 9661.00 | 2884.00 | 433.00 | 244.00 |
| 2019-20 | 15266.00 | 5673.00 | 263.00 | 424.00 |

*ಆರಂಭಿಕ ಶುಲ್ಕದಿಂದ ಭರಿಸಿದ ವೆಚ್ಚವು ಸೇರಿದಂತೆ.

**ಸಿಡಾಕ್**

ಕಳೆದ ಮೂರು ವರ್ಷಗಳಲ್ಲಿ ಸಿಡಾಕ್ ಸಂಸ್ಥೆಯಿಂದ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದ್ದು, ಅವುಗಳಿಗೆ ಬಿಡುಗಡೆಗೊಳಿಸಿದ ಅನುದಾನದ ವಿವರಗಳು ಈ ಕೆಳಗಿನಂತಿದೆ.

<table>
<tr><td></td><td></td><td>
<table>
<tr><td>ವರ್ಷ</td><td>ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)</td></tr>
<tr><td>2017-18</td><td>401.35</td></tr>
<tr><td>2018-19</td><td>578.41</td></tr>
<tr><td>2019-20</td><td>548.05</td></tr>
</table>
</td></tr>
<tr><td>(ಈ)</td><td>ಈ ಯೋಜನ / ಕಾರ್ಯಕ್ರಮಗಳನ್ನು ಸದುಪಯೋಗಪಡಿಸಿಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿವರಗಳನ್ನು ನೀಡುವುದು)</td><td>
<u>ಕೌಶಲ್ಯ ಮಿಷನ್</u><br>
ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ 84613 ಅಭ್ಯರ್ಥಿಗಳು ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ 14919 ಅಭ್ಯರ್ಥಿಗಳು ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದು ಸದುಪಯೋಗ ಪಡೆಸಿಕೊಂಡಿರುತ್ತಾರೆ.<br><br>
<u>ಡೇ-ನಲ್ಮ್</u><br>
ಅನುಬಂಧದಲ್ಲಿ ಲಗತ್ತಿಸಿದೆ.<br><br>
<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ:</u><br>
ಸಂಜೀವಿನಿ-ಕೆಎಸ್ಆರ್ಎಲ್‌ಪಿಎಸ್ ಸಂಸ್ಥೆಯಡಿ ಡಿಡಿಯುಜಿಕೆವೈ ಹಾಗೂ ಆರ್‌ಸೆಟಿ ಯೋಜನೆಯಡಿ ತರಬೇತಿ ಪಡೆದವರ ವಿವರ ಈ ಕೆಳಕಂಡಂತಿದೆ.<br>
<table>
<tr><td>ವರ್ಷ</td><td>ಡಿಡಿಯುಜಿಕೆವೈ</td><td>ಆರ್‌ಸೆಟಿ</td></tr>
<tr><td>2017-18</td><td>7748</td><td>27515</td></tr>
<tr><td>2018-19</td><td>5413</td><td>26041</td></tr>
<tr><td>2019-20</td><td>5131</td><td>21586</td></tr>
</table>
<u>ಸಿಡಾಕ್</u><br>
ಸಿಡಾಕ್ ಸಂಸ್ಥೆಯಿಂದ ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಂಡ ಫಲಾನುಭವಿಗಳ ಸಂಖ್ಯೆಯು ಈ ಕೆಳಗಿನಂತಿದೆ.<br>
<table>
<tr><td>ವರ್ಷ</td><td>ಕಾರ್ಯಕ್ರಮದಲ್ಲಿ ಭಾಗವಹಿಸಿದ ಅಭ್ಯರ್ಥಿಗಳ ಸಂಖ್ಯೆ</td></tr>
<tr><td>2017-18</td><td>24,533</td></tr>
<tr><td>2018-19</td><td>16,491</td></tr>
<tr><td>2019-20</td><td>23,016</td></tr>
</table>
</td></tr>
<tr><td>(ಉ)</td><td>ಇಂತಹ ಕಾರ್ಮಿಕರಿಗೆ ಸರ್ಕಾರದ ವತಿಯಿಂದ ನೀಡಲಾಗುತ್ತಿರುವ ಸೌಲಭ್ಯಗಳ ವಿವರಗಳನ್ನು ನೀಡುವುದು: (ಕಟ್ಟಡ ಕಾರ್ಮಿಕರನ್ನು ಒಳಗೊಂಡಂತೆ)</td><td>
<u>ಕೌಶಲ್ಯ ಮಿಷನ್</u><br>
ಸಿ.ಎಂ.ಕೆ.ಕೆ.ವೈ. ರಡಿ ಉಚಿತ ತರಬೇತಿಯನ್ನು ನೀಡಲಾಗುವುದು. ಪಿ.ಎಂ.ಕೆ.ವಿ.ವೈ.ರಡಿ ಉಚಿತ ತರಬೇತಿ ಜೊತೆಗೆ ಟೂಲ್‌ಕಿಟ್‌ಗಳನ್ನು ಒದಗಿಸಲಾಗುವುದು.<br>
<u>ಡೇ-ನಲ್ಮ್</u><br>
ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಯೋಜನೆಯಡಿ ಉಚಿತ ತರಬೇತಿಯನ್ನು ನೀಡಲಾಗುವುದು.<br><br>
<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ:</u><br>
ಡಿಡಿಯುಜಿಕೆವೈ ಯೋಜನೆಯಡಿ ತರಬೇತಿಗೆ ಉಚಿತ ಪಠ್ಯ ಸಾಮಾಗ್ರಿ, ಸಮವಸ್ತ್ರ ಮತ್ತು ತರಬೇತಿ ಕಿಟ್‌ಗಳನ್ನು ನೀಡಲಾಗುತ್ತಿದೆ. ವಸತಿ ಸಹಿತ ತರಬೇತಿ ಅವಧಿಗೆ ಊಟ ಮತ್ತು ವಸತಿ ನೀಡಲಾಗುವುದು. ವಸತಿ ರಹಿತ ತರಬೇತಿಯಲ್ಲಿ ಪ್ರತಿ ದಿನ ರೂ.125.00 ಗಳ ಪ್ರಯಾಣ ಭತ್ಯೆ ನೀಡಲಾಗುವುದು. ಸ್ಪೋಕನ್ ಇಂಗ್ಲೀಷ್, ಬೇಸಿಕ್ ಕಂಪ್ಯೂಟರ್, ಕೌಶಲ್ಯ ಮತ್ತು ಓ.ಜೆ.ಟಿ. ಪಠ್ಯಗಳನ್ನೊಳಗೊಂಡಿರುತ್ತದೆ. ತರಬೇತಿ ನಂತರ ಉದ್ಯೋಗ ಪಡೆದವರಿಗೆ ಮೂರು ತಿಂಗಳವರೆಗೆ ಪ್ರತಿ ತಿಂಗಳು ರೂ.1000 ರಂತೆ ರೂ.3000 ನೀಡಲಾಗುವುದು.
</td></tr>
</table>

ಆರ್‌ಸೆಟಿ ಯೋಜನೆಯಡಿ ಉಚಿತ ತರಬೇತಿಯನ್ನು ನೀಡಿ ಸ್ವಯಂ ಉದ್ಯೋಗಕ್ಕೆ ಆರ್ಥಿಕ ನೆರವಿಗೆ ಬ್ಯಾಂಕ್ ಸಂಪರ್ಕ ಕಲ್ಪಿಸಲಾಗುತ್ತಿದೆ.

(ಊ) ಕಳೆದ 3 ವರ್ಷಗಳಲ್ಲಿ ಇಲಾಖೆಗೆ [illegible] ದಿಂದ ಬಿಡುಗಡೆಯಾದ [illegible] ಎಷ್ಟು; ಇದನ್ನು ಯಾವ [illegible] ಉದ್ದೇಶಗಳಿಗೆ ಬಳಕೆ [illegible] ಗಿದೆ? (ಉದ್ದೇಶವಾರು [illegible] ಸುವುದು)

**ಕೌಶಲ್ಯ ಮಿಷನ್**

ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆಯಡಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ:-

(ರೂ.ಲಕ್ಷಗಳಲ್ಲಿ)

| ವರ್ಷ | ಬಿಡುಗಡೆಯಾದ ಅನುದಾನ | |
|---|---|---|
| | ಸಿ.ಎಂ.ಕೆ.ಕೆ.ವೈ. | ಪಿ.ಎಂ.ಕೆ.ವಿ.ವೈ. |
| 2017-18 | 7127.44 | 00.00 |
| 2018-19 | 4440.01 | 79.03 |
| 2019-20 | 6664.12 | 785.11 |

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಕೌಶಲ್ಯ ತರಬೇತಿಗೆ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ ಕೌಶಲ್ಯ ತರಬೇತಿ ಹಾಗೂ ಟೂಲ್‌ಕಿಟ್ ವಿತರಣೆಯ ಉದ್ದೇಶಕ್ಕಾಗಿ ಅನುದಾನವನ್ನು ಬಳಕೆ ಮಾಡಿಕೊಳ್ಳಲಾಗಿದೆ.

**ಡೇ-ನಲ್ಮ್**

ಡೇ-ನಲ್ಮ್ ಅಭಿಯಾನಕ್ಕೆ ಕಳೆದ 3 ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನವು ಬಿಡುಗಡೆಯಾಗಿರುತ್ತದೆ

| ವರ್ಷ | ಬಿಡುಗಡೆಯಾದ ಅನುದಾನ |
|---|---|
| 2017-18 | 3846.18 |
| 2018-19 | 0 |
| 2019-20 | 2742.70 |

ಮೇಲ್ಕಂಡಂತೆ ಬಿಡುಗಡೆಯಾದ ಅನುದಾನವನ್ನು ಈ ಕೆಳಕಂಡ ಕಾರ್ಯಕ್ರಮಗಳಿಗೆ ವಿನಿಯೋಗಿಸಿಕೊಳ್ಳಲಾಗಿದೆ.

- ಸ್ವ-ಸಹಾಯ ಸಂಘ ಮತ್ತು ಒಕ್ಕೂಟಗಳಿಗೆ ಆವರ್ತಕ ನಿಧಿ, ದಾಖಲಾತಿ ವಿತರಣೆ, ಕ್ಷೇತ್ರ ಭೇಟಿ ಮತ್ತು ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳಿಗೆ;
- ನಗರದ ನಿರುದ್ಯೋಗ ಯುವಕ / ಯುವತಿಯರಿಗೆ ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿ ಆಯೋಜಿಸಲು, ಪ್ರಮಾಣೀಕರಣ ಮತ್ತು ಮೌಲ್ಯಮಾಪನ ಕಾರ್ಯಕ್ರಮಗಳಿಗೆ;
- ವೈಯಕ್ತಿಕ ಮತ್ತು ಗುಂಪು ಕಿರು ಉದ್ದಿಮೆ, ಸ್ವ-ಸಹಾಯ ಸಂಘಗಳಿಗೆ ಎಸ್.ಹೆಚ್.ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್ ಕಾರ್ಯಕ್ರಮಗಳಿಗೆ ಬಡ್ಡಿ ಸಹಾಯಧನ ಮತ್ತು ಹೆಚ್ಚುವರಿ ಬಡ್ಡಿ ಸಹಾಯಧನಕ್ಕೆ;
- ನಗರದ ಬೀದಿ ವ್ಯಾಪಾರಸ್ಥರಿಗೆ ಗುರುತಿನ ಚೀಟಿ, ಮಾರಾಟ ಪ್ರಮಾಣ ಪತ್ರ, ಮಾರಾಟ ವಲಯಗಳಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸುವುದು ಹಾಗೂ ಗುರುತಿಸಲ್ಪಟ್ಟ ಬೀದಿ ವ್ಯಾಪಾರಸ್ಥರಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳ ಆಯೋಜನೆಗೆ;

ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆ ಮತ್ತು 3ನೇ ವ್ಯಕ್ತಿ ಸಮೀಕ್ಷೆಯ ಮೂಲಕ ಗುರುತಿಸುವಿಕೆ, ಹೊಸ ಆಶ್ರಯ ಕಟ್ಟಡ, ಆಶ್ರಯಗಳ ನವೀಕರಣ, ಆಶ್ರಯಗಳಿಗೆ ಒಂದು ಭಾರಿ ಮೂಲ ಭೂತ ಸೌಕರ್ಯ ಮತ್ತು ಆಶ್ರಯ ನಿರ್ವಹಣೆಯ ಕಾರ್ಯಕ್ರಮಗಳೀಗೆ;

- ಅಭಿಯಾನ ವ್ಯವಸ್ಥಾಪಕರು, ಮಲ್ಟಿಟಾಸ್ಕಿಂಗ್ ಅಫಿಷಿಯಲ್ಸ್, ಡಾಟಾ ಎಂಟ್ರಿ ಆಪರೇಟರ್ಸ್, ಡಿ-ಗ್ರೂಪ್ ಮುಂತಾದವರಿಗೆ ವೇತನ ಹಾಗೂ ಕಚೇರಿಯ ಆಡಳಿತಕ್ಕೆ ಸಂಬಂಧಿಸಿದಂತೆ ಕೆಲಸ ಕಾರ್ಯಗಳಿಗೆ;

ಮೇಲ್ಕಂಡ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನವನ್ನು ವಿನಿಯೋಗಿಸಿಕೊಳ್ಳಲಾಗಿರುತ್ತದೆ.

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ:**

ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನವು ಈ ಕೆಳಗಿನಂತಿರುತ್ತದೆ

(ರೂ.ಲಕ್ಷಗಳಲ್ಲಿ)

| ವರ್ಷ | ಯೋಜನೆ | |
|---|---|---|
| | ಡಿಡಿಯುಜಿಕೆವೈ | ಆರ್‌ಸೆಟಿ |
| 2017–18 | 3982.00 | 510.00 |
| 2018–19 | 9661.00 | 433.00 |
| 2019–20 | 15266.00 | 263.00 |

ಡಿಡಿಯುಜಿಕೆವೈ ಯೋಜನೆಯಡಿ ಅನುದಾನವನ್ನು ತರಬೇತಿ ನೀಡಲು ಅಭ್ಯರ್ಥಿಗಳನ್ನು ಕ್ರೂಢೀಕರಿಸಲು, ತರಬೇತಿ ನೀಡಲು ಹಾಗೂ ತರಬೇತಿಯ ನಂತರದ ಉದ್ಯೋಗ ನಿಯುಕ್ತಿಗೊಳಿಸಲು ವಿನಿಯೋಗಿಸಿಕೊಳ್ಳಲಾಗಿದೆ.

ಆರ್‌ಸೆಟಿ ಯೋಜನೆಯಡಿ ಅನುದಾನವನ್ನು ತರಬೇತಿ ನೀಡಿ ಸ್ವಯಂ ಉದ್ಯೋಗ ಹೊಂದಲು ವಿನಿಯೋಗಿಸಿಕೊಳ್ಳಲಾಗಿದೆ.

**ಸಿಡಾಕ್**

ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನವು ಈ ಕೆಳಗಿನಂತಿರುತ್ತದೆ.

| ವರ್ಷ | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|
| 2017–18 | 561.69 |
| 2018–19 | 899.00 |
| 2019–20 | 900.00 |

ಈ ಅನುದಾನವನ್ನು ಉದ್ಯಮಶೀಲತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಉದ್ದೇಶಕ್ಕಾಗಿ, ಸಂಬಂಧಿತ ವೆಚ್ಚಗಳನ್ನು ಭರಿಸುವುದಕ್ಕಾಗಿ ಹಾಗೂ ಸಿಡಾಕ್ ಸಂಸ್ಥೆಯ ಅಧಿಕಾರಿ / ಸಿಬ್ಬಂದಿಗಳ ಸಂಬಳಗಳನ್ನು ಸೇರಿದಂತೆ ಆಡಳಿತಾತ್ಮಕ ವೆಚ್ಚಗಳನ್ನು ಭರಿಸಲಾಗಿರುತ್ತದೆ.

ಸಂಖ್ಯೆ: ಕೌಉಜೀಇ 01 ಉಜೀಪ್ರ 2021

(ಡಾ|| ಸಿ.ಎನ್. ಅಶ್ವಥ್‌ನಾರಾಯಣ)
ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ,
ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.

## ಅನುಬಂಧ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 176 ರ (ಈ) ಉತ್ತರದ ಅನುಬಂಧ.

| ಕ್ರ ಸಂ | ಘಟಕದ ಹೆಸರ | ಪ್ರಯೋಜನವನ್ನು ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ |
|---|---|---|
| 1 | ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ | ಕಳೆದ 3 ವರ್ಷಗಳಲ್ಲಿ ಈ ಉಪಘಟಕದಡಿ, 7510 ಮಹಿಳಾ ಸ್ವ-ಸಹಾಯ ಗುಂಪುಗಳನ್ನು ರಚಿಸಿ, ಪ್ರತಿ ಗುಂಪಿಗೆ ರೂ.10,000/- ದಂತೆ ಸುತ್ತು ನಿಧಿಯನ್ನು ನೀಡಲಾಗಿರುತ್ತದೆ. ಪ್ರತಿ ಗುಂಪಿನಲ್ಲಿ ಸರಾಸರಿ 15 ಜನ ಸದಸ್ಯರಿದ್ದು, ಅದರಂತೆ, 1,12,500 ಮಹಿಳಾ ಫಲಾನುಭವಿಗಳು ಈ ಯೋಜನೆಯ ಪ್ರಯೋಜನೆಯನ್ನು ಪಡೆದುಕೊಂಡಿರುತ್ತಾರೆ. |
| 2 | ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ | ಕಳೆದ 3 ವರ್ಷಗಳಲ್ಲಿ ಈ ಉಪಘಟಕದಡಿ, 32817 ಫಲಾನುಭವಿಗಳು ತರಬೇತಿಯನ್ನು ಪಡೆದುಕೊಂಡಿದ್ದು, 1629 ಅಭ್ಯರ್ಥಿಗಳಿಗೆ ಉದ್ಯೋಗವನ್ನು ಪಡೆದುಕೊಂಡಿರುತ್ತಾರೆ. |
| 3 | ಸ್ವಯಂ ಉದ್ಯೋಗ ಕಾರ್ಯಕ್ರಮ | ಕಳೆದ 3 ವರ್ಷಗಳಲ್ಲಿ ಈ ಉಪಘಟಕದಡಿ, ವೈಯಕ್ತಿಕ ಕಿರುಉದ್ದಿಮೆಯಡಿ 1194 ಫಲಾನುಭವಿಗಳು, ಗುಂಪು ಕಿರುಉದ್ದಿಮೆಯಡಿ 1810 ಫಲಾನುಭವಿಗಳು (382 ಗುಂಪು) ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ನಡಿ 1459 ಗುಂಪುಗಳು ಅಂದರೆ 21885 ಮಹಿಳೆಯರು ಪ್ರಯೋಜನವನ್ನು ಪಡೆದುಕೊಂಡಿರುತ್ತಾರೆ. |
| 4 | ನಗರದ ವಸತಿ ರಹಿತರಿಗೆ ಆಶ್ರಯ | ಕಳೆದ 3 ವರ್ಷಗಳಲ್ಲಿ ಈ ಉಪಘಟಕದಡಿ, 985 ವಸತಿ ರಹಿತರಿಗೆ ಆಶ್ರಯವನ್ನು ಕಲ್ಪಿಸಲಾಗಿರುತ್ತದೆ. |
| 5 | ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ | ಕಳೆದ 3 ವರ್ಷಗಳಲ್ಲಿ ಈ ಉಪಘಟಕದಡಿ, 1,12,000 ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣಪತ್ರವನ್ನು ವಿತರಿಸಲಾಗಿರುತ್ತದೆ. |